ನಾವು ಅರಿಯಬಲ್ಲೆವು. ಎಳೆಯ ಪೀಳಿಗೆಯ ಎದುರು 'ಹೆಣ್ಣುಮಕ್ಕಳಿಗೆ ಮುಗಿಲು ಕೂಡ ಮಿತಿಯಲ್ಲ' ಎಂದು ಈ ಉದಾಹರಣೆಗಳನ್ನು ಇಡಬೇಕಿದೆ. ಅವರ ಆತ್ಮವಿಶ್ವಾಸವನ್ನು, ಆಕಾಶದಲ್ಲಿ ರೆಕ್ಕೆ ಬಿಚ್ಚಿ ಹಾರುವ ತವಕವನ್ನು ಪೋಷಿಸಬೇಕಿದೆ.

## ಸ್ವತಂತ್ರ ಮನೋಭಾವದ ಗುಂಜನ್

ಗುಂಜನ್ ಸಕ್ಸೇನಾ 1975ರ ಆಗಸ್ಟ್ 31ರಂದು ಗೌಹಾಟಿಯಲ್ಲಿ ಹುಟ್ಟಿದರು. ಅವರ ತಂದೆ ಕರ್ನಲ್ ಎ.ಕೆ. ಸಕ್ಸೇನಾ ಮತ್ತು ತಾಯಿ ಕೀರ್ತಿ ಸಕ್ಸೇನಾ. ಅಣ್ಣ ಅನ್ಷುಮನ್. ತಂದೆ ಭೂಸೇನೆಯಲ್ಲಿ ಕೆಲಸದಲ್ಲಿದ್ದ ಕಾರಣ, ಪ್ರತಿ ಎರಡು ಮೂರು ವರ್ಷಕ್ಕೆ ಅವರಿಗೆ ವರ್ಗವಾಗುತ್ತಿತ್ತು. ಈ ಬಂಜಾರಾ ಬದುಕು ಗುಂಜನ್‌ಗೆ ಖುಷಿಯನ್ನೇ ತರುತ್ತಿತ್ತು. ಊರಿಂದೂರಿಗೆ ಪಯಣ, ಪ್ರವಾಸ ಗುಂಜನ್‌ಗೆ ಬಲು ಸಂತಸದ ಹವ್ಯಾಸ. ಬ್ಯಾಕ್‌ಪ್ಯಾಕ್ ಹಿಡಿದು ಬೆಟ್ಟ ಗುಡ್ಡ ಹತ್ತಲು ಹೊರಡುತ್ತಿದ್ದ ಮಗಳನ್ನು ತಂದೆ ಪ್ರೋತ್ಸಾಹಿಸಿದ್ದರು. ತಂದೆ–ತಾಯಿ ಮಗಳನ್ನು ಸುಕೋಮಲೆಯಾಗಿ ನಾಜೂಕಾಗಿ ಬೆಳೆಸಲಿಲ್ಲ. ಮಗಳು 'ರಫ್ ಅಂಡ್ ಟಫ್' ಆಗಿ ಬೆಳೆಯಬೇಕು, ಸ್ವತಂತ್ರ ಮನೋಭಾವದವಳಾಗಿ ಆತ್ಮವಿಶ್ವಾಸದಿಂದ ಹೊಳೆಯಬೇಕು ಎಂಬ ಆಸೆ ತಂದೆಗಿತ್ತು. ಹಾಗೆಂದೇ ತಮ್ಮ ಗಂಡುಮಗ ಮತ್ತು ಹೆಣ್ಣುಮಗಳ ನಡುವೆ ಯಾವುದೇ ತಾರತಮ್ಯವನ್ನು ತೋರಿಸದ ಕುಟುಂಬದಲ್ಲಿ ಗುಂಜನ್ ಬೆಳೆದಳು. ಅಣ್ಣ ಮಾಡಬಹುದಾದ ಎಲ್ಲವನ್ನೂ ಗುಂಜನ್ ಮಾಡಲು ಅನುಮತಿ ಇತ್ತು.

ಬಾಲ್ಯದಿಂದಲೂ ತಂದೆಯ ಪ್ರಭಾವ ಗುಂಜನ್ ಮೇಲೆ ಹೆಚ್ಚಾಗಿತ್ತು. ಅಪ್ಪನಿಗೆ ವಾಹನ ಓಡಿಸುವುದರಲ್ಲಿ ಎಲ್ಲಿಲ್ಲದ ಆಸಕ್ತಿ. ಆ ಆಸಕ್ತಿ ಗುಂಜನ್‌ಗೆ ಹರಿದುಬಂದಿತು. ಆಕೆಯ ಅತ್ಯಂತ ಖುಷಿಯ ಬಾಲ್ಯದ ನೆನಪು ತಂದೆಗೆ ಜಮ್ಮುವಿನಿಂದ ಬರೋಡಾಗೆ ವರ್ಗವಾದ ಸಂದರ್ಭದ್ದು. ತಂದೆ ತಮ್ಮ ಫ್ಯೂಗಟ್ ಕಾರಿನಲ್ಲಿ ಡ್ರೈವ್ ಮಾಡಿಕೊಂಡೇ ಹೋಗೋಣ ಎಂದರು. ಇಪ್ಪತ್ತು ದಿನಗಳು ಹಿಡಿದ ಆ ಪಯಣ ಗುಂಜನ್ ಅವರ ಮನಸ್ಸಿನಲ್ಲಿ ಅಚ್ಚಳಿಯದ ಸವಿ ನೆನಪಾಗಿ ಉಳಿದಿತ್ತು. ಮೊದಲ ಬಾರಿಗೆ ಒಂದಿಷ್ಟು ದೂರ ಹೆದ್ದಾರಿಯಲ್ಲಿ ಗುಂಜನ್ ಕೂಡಾ ಕಾರು ಓಡಿಸಿದ್ದರು. ಗುಂಜನ್ ಬರೀ ಕಾರು ಓಡಿಸುವುದನ್ನು ಕಲಿತವರಲ್ಲ, ಅದರ ಟೈರ್ ಬದಲಾಯಿಸುವುದು, ಬ್ಯಾಟರಿಗೆ ನೀರು ತುಂಬುವುದು, ಮತ್ತಿತರ ದುರಸ್ತಿಯ ಸಣ್ಣ ಪುಟ್ಟ ಕೆಲಸಗಳನ್ನೂ ಅರಿತಿದ್ದರು. ಅಗತ್ಯಕ್ಕಿಂತ ಹೆಚ್ಚಾಗಿ ಯಾರ ಮೇಲೂ ಅವಲಂಬಿಸದ ಸ್ವತಂತ್ರ ಮನೋಭಾವದ ತರುಣಿಯಾಗಿ ಬೆಳೆದರು.

ಗುಂಜನ್ ಹಾರಾಟವನ್ನು ತಮ್ಮ ವೃತ್ತಿಯಾಗಿ ಏಕಾಏಕಿ ಆಯ್ದುಕೊಳ್ಳಲಿಲ್ಲ. ಅಪ್ಪನಂತೆ, ಗುಂಜನ್‌ಗೆ ಯಂತ್ರಗಳಲ್ಲಿ ಆಸಕ್ತಿ ಇತ್ತು. ಒಮ್ಮೆ ವಿಮಾನದ ಕಾಕ್‌ಪಿಟ್ ಒಳಹೊಕ್ಕು ನೋಡಲು ಸಿಕ್ಕ ಅವಕಾಶ ಗುಂಜನ್‌ಗೆ ಆಗಸದ ಹಾರಾಟವನ್ನು ಮತ್ತಷ್ಟು ಆಕರ್ಷಕವಾಗಿಸಿತ್ತು. ಒಂಬತ್ತನೇ ತರಗತಿಗೆ ಬರುವ ಹೊತ್ತಿಗಾಗಲೇ ತಾನು ಪೈಲೆಟ್ ಆಗುವುದಾಗಿ ನಿಶ್ಚಯಿಸಿದ್ದರು. ದಿಲ್ಲಿ


ವಾಯುಪಡೆಯ ಪುರುಷ ಅಧಿಕಾರಿಯ ಕಚೇರಿಯ ಗೋಡೆಯ ಮೇಲೆ ಹೆಂಗಸಿನ 'ಪಿನ್ ಅಪ್' ಫೋಟೊ


ವಾಯುಪಡೆಯ ಪ್ರಥಮ ಹೆಲಿಕಾಪ್ಟರ್ ಪೈಲೆಟ್ ಚೆರಿಲ್ ದತ್ತಾ


ಪುಟ್ಟ ಗುಂಜನ್ ತಂದೆ, ತಾಯಿ ಮತ್ತು ಅಣ್ಣನೊಡನೆ